ಪಿಡಬ್ಲೂ.1: ಮಂಜುನಾಥ್.ಕೆ.,

**ದಿನಾಂಕಃ 14.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**8.** ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ನಾನು ನಮ್ಮ ಕಂಪನಿಯ ಮಾಲೀಕರು ಮತ್ತು ತ್ಯಾಗರಾಜುರವರ ವಿರುದ್ದ ಜೆ.ಪಿ.ನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದೂರಿನ ಪ್ರತಿ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು **ನಿ.ಡಿ.1** ಎಂದು ಗುರುತಿಸಲಾಯಿತು. ನಿ.ಡಿ.1 ರ ದೂರನ್ನು ನಾನು ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಎಂಟರ್‌ಪ್ರೈಸಸ್ ನ ಪ್ರೊಪ್ರೈಟರ್ ಆಗಿ ನೀಡಿರುತ್ತೇನೆ. ನಿ.ಡಿ.1 ರಲ್ಲಿ "ವಿಶೇಷ ಸೂಚನೆ ಎಂದು --------- ಪ್ರಯತ್ನಕ್ಕೆ ಸತತವಾಗಿ ಅಡ್ಡಿ ಮಾಡುತ್ತಿದ್ದಾರೆ" ಎಂದು ನಮೂದಿಸಿದ್ದಾರೆ ಎಂದರೆ ಸರಿ ಎಂದು ಒಪ್ಪಿಕೊಂಡ ಮೇರೆಗೆ ಸದರಿ ಭಾಗವನ್ನು **ನಿ.ಡಿ.1(ಎ)** ಎಂದು ಗುರುತಿಸಲಾಯಿತು. ನೀವು ಕಂಪನಿಗೆ ಕೆಲಸ ಮಾಡಿಕೊಡುತ್ತಿದ್ದೀರಾ ಎಂದರೆ ಸರಿ. ಆರೋಪಿಗೆ ಕಂಪನಿಯ ಪರವಾಗಿ ಚೆಕ್ಕು ನೀಡುವ ಅಧಿಕಾರ ಇತ್ತೋ ಇಲ್ಲವೋ ಎಂದರೆ ಸಾಕ್ಷಿಯು ಅಧಿಕಾರ ಇತ್ತು ಎಂದು ನುಡಿಯುತ್ತಾರೆ. ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಎಂಟರ್‌ಪ್ರೈಸಸ್ ನ ಖಾತೆ ಐಸಿಐಸಿಐ ಬ್ಯಾಂಕಿನಲ್ಲಿ ಇದೆ, ಖಾತೆ ನಂಬರ್ ನೆನಪಿರುವುದಿಲ್ಲ.

**9.** ನಿಮ್ಮ ದೂರಿನ 7 ನೇ ಖಂಡಿಕೆಯಲ್ಲಿ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಸಹ ಚೆಕ್ಕು ನೀಡಿರುತ್ತಾರೆ ಎಂದು ನಮೂದಿಸಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಅನುಮಾನವಿದ್ದು ನಾನು ಚೆಕ್ಕನ್ನು ಹಾಜರುಪಡಿಸಿದಾಗ ಬ್ಯಾಂಕಿನವರು ಸ್ಟಾಪ್ ಪೇಮೆಂಟ್ ಎಂದು ಹಿಂಬರಹ ನೀಡಿದರು ಎಂದು ನುಡಿಯುತ್ತಾರೆ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿತ್ತೋ ಇಲ್ಲವೋ ಎಂದು ನಿಮಗೆ ತಿಳಿದಿತ್ತೆ ಎಂದರೆ ಆ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕಷ್ಟು ಹಣವಿಲ್ಲದಿದ್ದರೂ ಚೆಕ್ಕು ನೀಡಿರುತ್ತಾರೆ

ಎಂದು ನಿಮ್ಮ ಪಿರ್ಯಾದಿನಲ್ಲಿ ನಮೂದಿಸಿರುವುದು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಮೊದಲು ನಾನು ಆ ರೀತಿ ತಿಳಿದಕೊಂಡಿದ್ದೆನು, ಆನಂತರ ಬ್ಯಾಂಕಿನವರು ಹಿಂಬರಹ ನೀಡಿದಾಗ ಸ್ಟಾಪ್ ಪೇಮೆಂಟ್ ಆಗಿರುವ ವಿಷಯ ನನಗೆ ತಿಳಿದಿರುತ್ತದೆ. ಪಿರ್ಯಾದನ್ನು ಸಲ್ಲಿಸಿದ ನಂತರ ನೀವು ಬ್ಯಾಂಕಿಗೆ ಹೋಗಿ ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಿ.21.02.2024 ರಂದು ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಎಂಟರ್‌ಪ್ರೈಸಸ್ ರವರಿಗೆ 15 ಲಕ್ಷ ರೂ.ಗಳಿಗೆ ಐಸಿಐಸಿಐ ಬ್ಯಾಂಕಿನ ಚೆಕ್ಕು ನಂಬರ್ 000985 ಅನ್ನು ಆರೋಪಿ ಕಂಪನಿಯ ಪರವಾಗಿ ನೀಡಿದ್ದರು ಎಂದರೆ ಸರಿ. ಆ ಚೆಕ್ಕು ನಗದೀಕರಣವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲ್ಕಂಡ ಚೆಕ್ಕು ಮುಖಾಂತರ ನಿಮ್ಮ ಖಾತೆಗೆ ಹಣ ಜಮಾ ಆಗಿರುವ ಬಗ್ಗೆ ನಮ್ಮ ಬಳಿ ದಾಖಲೆಗಳಿವೆ ಎಂದರೆ ಅದನ್ನು ನನ್ನ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಪರಿಶೀಲಿಸಬೇಕು ಎಂದು ನುಡಿಯುತ್ತಾರೆ. ಅದನ್ನು ಪರಿಶೀಲಿಸಿ ಹೇಳುತ್ತೇನೆ.

**10.** ನಿಮ್ಮನ್ನು ಕೆಲವು ಜನ ಮಂಜುನಾಥ್ ಗೌಡ ಎಂದು ಕರೆಯುತ್ತಾರೆ ಎಂದರೆ ಸರಿ. ನೀವು ಮಂಜುನಾಥ್ ಗೌಡ ಎಂದು ಸಹಿ ಕೂಡ ಮಾಡುತ್ತೀರಾ ಎಂದರೆ ಕೆಲವೊಮ್ಮೆ ಮಾಡುತ್ತೇನೆ ಎಂದು ನುಡಿಯುತ್ತಾರೆ. ದಿ.15.02.2024 ರಂದು ಶೃತಿ ಶುಭಲಾಲ್ ರವರ ವಿರುದ್ದ ಸಹಾಯಕ ಕಾರ್ಯಪಾಲು ಅಭಿಯಂತರರು, ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇಲ್ಲಿಗೆ ದೂರು ನೀಡಿದ್ದೆನು ಎಂದರೆ ಸರಿ. ಶೃತಿ ಶುಭಲಾಲ್ ರವರು ನಾನು ಕೆಲಸ ಮಾಡುತ್ತಿದ್ದ ಕಂಪನಿಯ ನಿರ್ದೇಶಕರ ಮಗಳು. ಏತಕ್ಕಾಗಿ ನೀವು ಅವರ ವಿರುದ್ದ ದೂರು ದಾಖಲಿಸಿದ್ದೀರಿ ಎಂದರೆ ಕಟ್ಟಡ ನಿರ್ಮಾಣದ ವಿಷಯವಾಗಿ ಅವರ ವಿರುದ್ದ ದೂರು ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ನಂತರದಲ್ಲಿ ನೀವೇ ಸ್ವತಃ ದೂರನ್ನು ಹಿಂಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಶೃತಿ ಶುಭಲಾಲ್ ರವರೇ ದುಡ್ಡನ್ನು ವಾಪಸ್ ನೀಡುತ್ತೇನೆ

ದೂರನ್ನು ಹಿಂಪಡೆದುಕೊಳ್ಳಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.